ಪರಿಕಲ್ಪನೆಯನ್ನು ಶಾಶ್ವತಗೊಳಿಸುತ್ತದೆ. ನನ್ನ ಆಫ್ರಿಕಾ ಸಾವಿರ ಬಣ್ಣಗಳ ಕಾಮನಬಿಲ್ಲು. ನನ್ನ ಆಫ್ರಿಕಾತನವನ್ನ ನಾನು ಬದುಕಲು ಖುಷಿಪಡುತ್ತಿರುವಾಗಲೇ, ನನ್ನ ಭಾಷೆ, ನನ್ನ ಸಂಸ್ಕೃತಿ, ನನ್ನ ಅನುಭವ ಎಂಬ ಬಹುತ್ವದ ಗುರುತುಗಳಿಂದ ನಾನು ಕಟ್ಟಲ್ಪಟ್ಟಿದ್ದೇನೆ ಎಂಬುದೂ ನಿಜ. ಇವೆಲ್ಲವೂ ಬೇರೆ ಬೇರೆ ಆಫ್ರಿಕನ್ ಸಮುದಾಯಗಳಲ್ಲಿ ನಿಚ್ಚಳವಾಗಿ ಕಣ್ಣಿಗೆ ಕಾಣುವಷ್ಟು ಭಿನ್ನವಾಗಿವೆ. ಇದರ ಅರ್ಥ ನಮ್ಮ ನಡುವೆ ಯಾವುದೇ ಸಾಮ್ಯ ಇಲ್ಲವೆಂದಲ್ಲ. ಉದಾಹರಣೆಗೆ 'ಉಬುಂತು'ವಿನ ಬಗ್ಗೆ ನಮ್ಮ ಮನೋಧರ್ಮ. Ubuntu ಅನ್ನೋದು 'ಎಲ್ಲರಿಗಾಗಿ ಮಾನವೀಯತೆ' ಎಂಬ ಅರ್ಥವಿರುವ ಒಂದು ಪ್ರಾಚೀನ ಆಫ್ರಿಕನ್ ಪದ. ಉಬುಂತು ಎಂದರೆ ಮನುಷ್ಯತ್ವದ ಹೊಕ್ಕುಳು; ಮನುಷ್ಯತ್ವದ ಮಕ್ಕಳು!

**◆ ಉತ್ತರ ಉಗಾಂಡದಲ್ಲಿ 'The Lord's Resistance Army'ಯ ಹೆಸರಿನಲ್ಲಿ ಜರುಗಿದ ಎರಡು ದಶಕಗಳ ಯುದ್ಧದ ಒಟ್ಟಾರೆ ಸಾಂಸ್ಕೃತಿಕ ಹಾಗೂ ರಾಜಕೀಯ ಪರಿಣಾಮಗಳೇನು?**

ಮಕ್ಕಳ ಆಟಪಾಠವೂ ಸೇರಿದಂತೆ ಹಲವು ದಿಕ್ಕಿನಲ್ಲಿ ನಮ್ಮ ಬದುಕು ಹದಗೆಟ್ಟಿತ್ತು. ಎಂಟು ತಾಸುಗಳ ಬದಲಾಗಿ ನಾಲ್ಕೇ ತಾಸು ಶಾಲೆ ನಡೆಯುತ್ತಿದ್ದ ಆ ದಿನಗಳು ನೆನಪಿವೆ. ಮನೆಯಿಂದ ಆದಷ್ಟು ಬೇಗ ಅಥವಾ ತಡವಾಗಿ ಹೊರಹೋಗುವುದರಿಂದ ಬಂಡುಕೋರರ ಅಪಹರಣಕ್ಕೆ ವಿದ್ಯಾರ್ಥಿಗಳು ಒಳಗಾಗುವ ಸಂಭವವಿತ್ತು. 2006ರ ನಂತರ ಬಂದೂಕುಗಳು ತಣ್ಣಗಾದರೂ, ಉತ್ತರ ಉಗಾಂಡ ಯುದ್ಧದ ವಿಧ್ವಂಸಕ ಪರಿಣಾಮಗಳನ್ನು ಇನ್ನೂ ಎದುರಿಸುತ್ತಿದೆ. ಬಡತನವಂತೂ ಇದ್ದೇ ಇದೆ. ಸರ್ಕಾರ ಮತ್ತು ಬಲಾಢ್ಯ ವ್ಯಕ್ತಿಗಳು ರೈತರಿಗೆ ಯಾವುದೇ ಮಾಹಿತಿ ಅಥವಾ ಪರಿಹಾರ ಕೊಡದೆ, ಅವರ ಭೂಮಿ ಕಬಳಿಸುವಂತಹ ಹೊಸ ತೆರನಾದ ಯುದ್ಧ ಶುರುವಾಗಿದೆ.

**◆ ಬುಡಕಟ್ಟು ದೈವಾರಾಧನೆಯ ನಂಬಿಕೆಯ ಲೋಕ ಹಾಗೂ ಏಕ ದೇವತಾರಾಧನೆಯ ಧಾರ್ಮಿಕ ಲೋಕಗಳ ನಡುವೆ ಯಾವ ಪ್ರಧಾನ ವ್ಯತ್ಯಾಸವನ್ನು ಗುರುತಿಸುವಿರಿ?**

ಇದೊಂದು ಜಿಜ್ಞಾಸೆಯ ಪ್ರಶ್ನೆ. ನಾನು ಧಾರ್ಮಿಕ ವಿಷಯಗಳಲ್ಲಿ ಪರಿಣಿತೆಯಲ್ಲ. ಧರ್ಮವನ್ನು ಆಳವಾಗಿ ಅಧ್ಯಯನ ಮಾಡಿಲ್ಲ. ಪಾಶ್ಚಾತ್ಯ ವಸಹಾತುಶಾಹಿಯಿಂದ ಆಮದು ಮಾಡಿಕೊಂಡಿರುವ 'ಸಂಘಟಿತ' ಪಾಶ್ಚಾತ್ಯ ಧರ್ಮದೊಂದಿಗೆ ತುಂಬಿದ ಸಂಬಂಧ ನನಗಿತ್ತು ಎಂಬುದನ್ನಷ್ಟೇ ನಾನು ಹಂಚಿಕೊಳ್ಳಬಹುದು. ಯೆಹೊವಾನ (ಹೀಬ್ರೂ ಬೈಬಲ್‌ನಲ್ಲಿ ಬರುವ ದೇವನ) ಸಾಕ್ಷಿಯಾಗಿ ನಾನು ಬೆಳೆದೆ. ಕ್ಯಾಥೋಲಿಕ್ ಧರ್ಮವನ್ನು ಕೆಲ ಕಾಲ ಆತುಕೊಂಡೆ. ಮತ್ತೆ Anglicanismಗೆ ಸೇರಿಕೊಂಡೆ. ಪ್ರಸ್ತುತ ನಾನು ಯಾವುದೇ ಸ್ಥಾಪಿತ ಮತಪಂಥಕ್ಕೆ ಸೇರಿದವಳಲ್ಲ. ಬಹುತೇಕ ಎಲ್ಲಾ ಸಂಘಟಿತ ಧರ್ಮಗಳು ತಮ್ಮ ಅನುಯಾಯಿಗಳ ಮೇಲೆ ಕಾಂಚಾಣಕ್ಕಾಗಿ ಎರಗುತ್ತವೆ ಎಂಬುದು ನನ್ನ ಅನುಭವ. ಇದನ್ನು ಬೇಕಾದರೆ 'ಬಂಡವಾಳ' ಎಂಬ ಅರ್ಥದಲ್ಲಿ ಕರೆಯಬಹುದೇನೋ. ಪ್ರಸ್ತುತ, ನಾನು ನನ್ನ ಕೈಲಾದಷ್ಟು 'ನೀವಿರುವುದಕ್ಕೆ ನಾನಿದ್ದೇನೆ' ಎಂಬ ಉಬುಂತು ಪರಿಕಲ್ಪನೆಯಂತೆ ಬದುಕಲು ಪ್ರಯತ್ನಿಸುತ್ತಿದ್ದೇನೆ. ಇದೊಂದು ನಿರಂತರ ಅಭ್ಯಾಸ. ಯಾವುದೇ ಧರ್ಮವನ್ನು ಅನುಸರಿಸುವವರನ್ನ ಗೌರವಿಸುವುದು ಎಂಬ ಅರ್ಥವೂ ಇದಕ್ಕಿದೆ.

**◆ ಹೊಸ ತಲೆಮಾರಿನ ಲೇಖಕಿಯಾಗಿ ಆಫ್ರಿಕಾದ ನೆಲದಲ್ಲಿ ನಿಂತು ಮಹಿಳಾ ಅಸ್ಮಿತೆಯನ್ನು ಗುರುತಿಸುವ ಬಗೆ ಯಾವುದು? ಆಫ್ರಿಕಾ ದೇಶಗಳಿಗೇ ವಿಶಿಷ್ಟವೆನಿಸುವ ಮಹಿಳಾಧ್ವನಿ ಏನಾದರೂ ಅಸ್ತಿತ್ವದಲ್ಲಿದೆಯೇ?**

ಸಾಂದರ್ಭಿಕ ಭೇಟಿಯ ಹೊರತಾಗಿ, ಐದಾರು ವರ್ಷಗಳಿಂದ ನಾನು ಆಫ್ರಿಕಾದಲ್ಲಿ ಬದುಕಿಲ್ಲ. ಆದ್ದರಿಂದ ಈ ಪ್ರಶ್ನೆ 'ಟ್ರಿಕ್ಕಿ' ಅನಿಸುತ್ತದೆ. ಆದಾಗ್ಯೂ, ಆಫ್ರಿಕಾ ಖಂಡದಲ್ಲೇ ಇರುವ ಲೇಖಕಿಯರು ಮತ್ತು ನನ್ನಂತಾ ಡಯಾಸ್ಪೋರಿಕ್ (ಹೊರಗೆ ಹರಡಿಕೊಂಡಿರುವ) ಲೇಖಕಿಯರೂ ತಮ್ಮ ಗಾಢ ಅನುಭವಗಳನ್ನ ಸಾಹಿತ್ಯದಲ್ಲಿ ಸೆರೆಹಿಡಿಯಲು ಸದಾ ಯತ್ನಿಸಿದ್ದಾರೆಂದು ನನ್ನ ನಂಬಿಕೆ. ಆದರೆ, ಯಾವುದೇ ನಿರ್ದಿಷ್ಟ ತಲೆಮಾರಿನ ಆಫ್ರಿಕನ್ ಮಹಿಳೆಯರು ಎಲ್ಲರನ್ನೂ ಪ್ರತಿಧ್ವನಿಸುವ ಒಂದು ಧ್ವನಿಯನ್ನು ಪಡೆಯುವುದು ಸಾಧ್ಯವಿಲ್ಲವೆಂದು ನನ್ನ ವಾದ. ಹಿಂಸೆ, ಯುದ್ಧ, ವಲಸೆ,